ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ,
ಚಾವಿಸನಿನಿ, ಮೈಸೂರು-570017
Telephone No: 0821-234338

CHAMUNDESHWARI ELECTRICITY
SUPPLY CORPORATION LIMITED
*(A Government of Karnataka Undertaking)*
Corporate Office,
CESC, Mysuru-570017
**Web Site: www.cescmysore.org.**
E-mail ID:gmhrd@cescmysore.org
Company Identity Number[CIN]:- **U40109KA2004SGC035177**

# ಸಭಾ ನಡಾವಳಿ

ದಿನಾಂಕ: 16.12.2023 ರಂದು ಅಪರಾಹ್ನ 04:30 ಗಂಟೆಗೆ ನಿಗಮ ಕಛೇರಿಯ ಸಭಾಂಗಣದಲ್ಲಿ ಮಾನ್ಯ ಪ್ರಧಾನ ವ್ಯವಸ್ಥಾಪಕರು(ಆ&ಮಾಸಂ) ರವರ ಅಧ್ಯಕ್ಷತೆಯಲ್ಲಿ ಚಾವಿಸನಿನಿಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ನೌಕರರುಗಳಿಗೆ ದಿನಾಂಕ:16.12.2023 ರಿಂದ ದಿನಾಂಕ:15.12.2024ರ ಅವಧಿಯ ವೈಯಕ್ತಿಕ ಗುಂಪು ವಿಮಾ ಯೋಜನೆ ಪ್ರಕ್ರಿಯೆಗಳನ್ನು ಜಾರಿಗೊಳಿಸುವ ಸಲುವಾಗಿ ಚರ್ಚಿಸಲು ಕರೆಯಲಾದ ಸಭೆಯ ನಡಾವಳಿ.

**ಸಭೆಯಲ್ಲಿ ಉಪಸ್ಥಿತರಿದ್ದ ಸಂಘದ ಪದಾಧಿಕಾರಿಗಳು/ಅಧಿಕಾರಿಗಳು:**

ಶ್ರೀಮತಿ/ಶ್ರೀ

- ರವಿಕುಮಾರ್ ಪಿ, ಪ್ರಧಾನ ವ್ಯವಸ್ಥಾಪಕರು(ಆ&ಮಾಸಂ), ನಿಗಮ ಕಾರ್ಯಾಲಯ, ಮೈಸೂರು.
- ಉಪಾಧ್ಯಕ್ಷರು, ಚಾವಿಸನಿನಿ, ನೌಕರರ ಸಂಘ, ರಿ(659).
- ಉಪಾಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ.
- ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರು, ಚಾವಿಸನಿನಿ, ಲೆಕ್ಕಾಧಿಕಾರಿಗಳ ಸಂಘ.
- ಎಂ.ಪಿ.ಮಹೇಶ್ ಚಂದ್ರ, ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆ&ಮಾಸಂ).
- ಪುಟ್ಟಸ್ವಾಮಿಗೌಡ, ವ್ಯವಸ್ಥಾಪಕರು(ಆ&ಮಾಸಂ).
- ಎಂ.ಗಣೇಶ್, ಸಹಾಯಕ(ಆ&ಮಾಸಂ).

ಸಹಾಯಕ ಪ್ರಧಾನ ವ್ಯವಸ್ಥಾಪಕರು(ಆ&ಮಾಸಂ), ನಿಗಮ ಕಾರ್ಯಾಲಯ ಇವರು ಚಾವಿಸನಿನಿಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ನೌಕರರುಗಳಿಗೆ ದಿನಾಂಕ:16.12.2023 ರಿಂದ ದಿನಾಂಕ:15.12.2024ರ ಅವಧಿಯ ವೈಯಕ್ತಿಕ ಗುಂಪು ವಿಮಾ ಯೋಜನೆ ಪ್ರಕ್ರಿಯೆಗಳನ್ನು ಜಾರಿಗೊಳಿಸುವ ಸಲುವಾಗಿ ಚರ್ಚಿಸಲು ಸಭೆಗೆ ಹಾಜರಾದ ಎಲ್ಲಾ ಸಂಘದ ಪದಾಧಿಕಾರಿಗಳು/ಅಧಿಕಾರಿಗಳನ್ನು ಸ್ವಾಗತಿಸಿದರು.

ಚಾವಿಸನಿನಿಯ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ನೌಕರರುಗಳಿಗೆ ವೈಯಕ್ತಿಕ ಗುಂಪು ವಿಮಾ ಯೋಜನೆ ಪ್ರಕ್ರಿಯೆಗಳನ್ನು ಜಾರಿಗೊಳಿಸುವ ಸಲುವಾಗಿ ಟೆಂಡರ್‌ನ್ನು ಇ-ಪ್ರಕ್ಯೂರ್‌ಮೆಂಟ್ ಮೂಲಕ ನಿಗಮ ಕಾರ್ಯಾಲಯದಿಂದ ಟೆಂಡರ್ ಕರೆಯಲಾಗಿರುತ್ತದೆ. ಸದರಿ ಇ-ಪ್ರಕ್ಯೂರ್‌ಮೆಂಟ್ ಟೆಂಡರ್‌ನಲ್ಲಿ ಭಾಗವಹಿಸಿ ಮೆ॥ ಇಫ್ಕೋ ಟೋಕಿಯೊ ಜನರಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ ರವರು ರೂ. 5014/-ಗಳನ್ನು ಪ್ರತಿ ಸಿಬ್ಬಂದಿಗೆ ದರ ದಾಖಲಿಸಿ ಎಲ್1 ಬಿಡ್ ದಾರರಾಗಿ ಆಯ್ಕೆಯಾಗಿರುತ್ತಾರೆ.

ಸದರಿ ವೈಯುಕ್ತಿಕ ಗುಂಪು ವಿಮಾ ಯೋಜನೆಯ ಅನುಷ್ಠಾನ ಸಂಬಂಧ ಕಾರ್ಯಾದೇಶದನ್ವಯ ಪ್ರತಿ ಸಿಬ್ಬಂದಿಗೆ **ರೂ.**5014/-ಗಳಂತೆ ನಿಗಮದ ವತಿಯಿಂದ ಮೊದಲು ಮೆ॥ ಇಫ್ಕೋ ಟೋಕಿಯೊ ಜನರಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ ರವರಿಗೆ ಪಾವತಿ ಮಾಡಿ ದಿನಾಂಕ:16.12.2023ರಿಂದ ಅನ್ವಯವಾಗುವಂತೆ ಜಾರಿಗೊಳಿಸಬೇಕಾಗಿರುತ್ತದೆ ಎಂದು ಉಪ ಪ್ರಧಾನ ವ್ಯವಸ್ಥಾಪಕರು,ಖರೀದಿ ಶಾಖೆಯವರು ಸಭೆಗೆ ಮಾಹಿತಿಯನ್ನು ನೀಡಿದರು.

ಮುಂದುವರೆದು, ಚಾವಿಸನಿನಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿ/ನೌಕರರುಗಳಿಗೆ **ವೈಯುಕ್ತಿಕ ಗುಂಪು ವಿಮಾ ಯೋಜನೆಯನ್ನು** ದಿನಾಂಕ: 16.12.2023 ರಿಂದ 15.12.2024 ರ ವಿಮೆ ಅವಧಿಯಲ್ಲಿ ಯಾವುದೇ ಅಪಘಾತದಿಂದ ಮರಣ ಅಥವಾ ಅಶಕ್ತತೆ ಉಂಟಾದಲ್ಲಿ ಅಧಿಕಾರಿ/ನೌಕರನ ಅವಲಂಬಿತರಿಗೆ ಮೆ॥ ಇಫ್ಕೋ ಟೋಕಿಯೊ ಜನರಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ರವರ ವತಿಯಿಂದ ಈ ಕೆಳಕಂಡಂತೆ ಪರಿಹಾರ ಪಾವತಿ ಮಾಡಲಾಗುವುದು ಎಂದು ಉಪ ಪ್ರಧಾನ ವ್ಯವಸ್ಥಾಪಕರು, ಖರೀದಿ ಶಾಖೆರವರು ಸಭೆಯಲ್ಲಿ ತಿಳಿಸಿದರು.

| SL. No | Particulars | Insurance Coverage |
|---|---|---|
| 1 | Death only | Rs.50,00,000/- or 60 Months gross salary income of the employee whichever is lower, subject to minimum of Rs. 25,00,000/- |
| 2 | Loss of two limbs or two eyes or one limb and one eye | Rs.25,00,000/- |
| 3 | Loss of one limb or one eye | Rs.12,50,000/- |
| 4 | Permanent Total disability(PTD) from injuries other than those named above | Rs.25,00,000/- |
| 5 | Permanent Partial Disability | Percentage of benefits as per annexure-A(As per Schedule-1 of Employee Compensation Act, 1923) |
| 6 | Temporarily total Disability | Rs.10,000/- per week up to 104 weeks. |

ಉಪಾಧ್ಯಕ್ಷರು, ಚಾವಿಸನಿನಿ, ನೌಕರರ ಸಂಘ, ರಿ(659), ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀಹರ್ಷ ರಸ್ತೆ, ಮೈಸೂರುರವರು ಈ ಕೆಳಕಂಡಂತೆ ಅಭಿಪ್ರಾಯ ವ್ಯಕ್ತಪಡಿಸಿದರು.

- ನಿಗಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿ ಸಿಬ್ಬಂದಿಯಿಂದ ಡಿಸೆಂಬರ್-2023ರ ಮತ್ತು ಜನವರಿ-2024ರ ಮಾಹೆಯ ವೇತನದಲ್ಲಿ **ರೂ.5014/- ಗಳನ್ನು ಎರಡು ಸಮಾನ ಕಂತುಗಳಲ್ಲಿ** ಕಡಿತಗೊಳಿಸುವುದು.
- ಕಾರ್ಯಾದೇಶ ನೀಡುವಾಗ ಪರಿಹಾರ ಮೊತ್ತ Gross salary ಎಂದರೆ Basic+ DA+ HRA+ CCA+ Others and consolidated Pay ಎಂದು ನಮೂದಿಸುವುದು.

ಈ ಹಿನ್ನಲೆಯಲ್ಲಿ ದಿನಾಂಕ:16.12.2023 ರಿಂದ 15.12.2024ರ ಒಂದು ವರ್ಷದ ಅವಧಿಗೆ ರೂ. 50 ಲಕ್ಷ ಮೌಲ್ಯದ ವೈಯುಕ್ತಿಕ ಗುಂಪು ವಿಮಾ ಯೋಜನೆಯನ್ನು ಹೊಸದಾಗಿ ಪಡೆಯಲು **ಮೆ॥ ಇಫ್ಕೋ ಟೋಕಿಯೊ ಜನರಲ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್** ರವರಿಗೆ ಕಾರ್ಯಾದೇಶದನ್ವಯ ಪಾವತಿ ಮಾಡುವುದು ಹಾಗೂ ವಿಮಾ ಮೊತ್ತವನ್ನುನಿಗಮವು ಮೊದಲು ಭರಿಸಿ ನಂತರ ಎಲ್ಲಾ ಅಧಿಕಾರಿ/ನೌಕರರುಗಳ ಡಿಸೆಂಬರ್-2023 ಹಾಗೂ ಜನವರಿ-2024ರ ವೇತನದಲ್ಲಿ ಸಮಾನ ಕಂತುಗಳಲ್ಲಿ ಕಡಿತಗೊಳಿಸಲು ಎಲ್ಲಾ ಸಂಘದ ಪದಾಧಿಕಾರಿಗಳು ಸರ್ವಾನುಮತದಿಂದ ಸಮ್ಮತಿ ಸೂಚಿಸಿರುತ್ತಾರೆ.

ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಪ್ರಧಾನ ವ್ಯವಸ್ಥಾಪಕರು (ಆ&ಮಾಸಂ)

| ಕ್ರ.ಸಂ | ಸಂಘ ಪದಾಧಿಕಾರಿಗಳು | ಸಹಿ |
|---|---|---|
| 1 | ಉಪಾಧ್ಯಕ್ಷರು, ಚಾವಿಸನಿನಿ, ನೌಕರರ ಸಂಘ, ರಿ(659), ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು. | Sd/- |
| 2 | ಉಪಾಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಕಡಕೊಳ, ಮೈಸೂರು. | Sd/- |
| 3 | ಉಪಾಧ್ಯಕ್ಷರು, ಪರಿಶಿಷ್ಠ ಜಾತಿ/ಪರಿಶಿಷ್ಠ ವರ್ಗಗಳ ಕಲ್ಯಾಣ ಸಂಸ್ಥೆ, (ರಿ.), ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು. | ಗೈರು ಹಾಜರಾಗಿರುತ್ತಾರೆ |
| 4 | ಉಪಾಧ್ಯಕ್ಷರು, ಡಿಪ್ಲೋಮ, ಇಂಜಿನಿಯರ್‌ಗಳ ಸಂಘ, ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು. | ಗೈರು ಹಾಜರಾಗಿರುತ್ತಾರೆ |
| 5 | ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರು, ಚಾವಿಸನಿನಿ, ಲೆಕ್ಕಾಧಿಕಾರಿಗಳ ಸಂಘ, ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು. | Sd/- |

ಮೆಮೋ ಸಂಖ್ಯೆ: ಸೆಸ್ಕ/ಆ&ಮಾಸಂ/03/03/2022-23/ cys-1274 ದಿನಾಂಕ: 16 DEC 2023

**ಪ್ರತಿಗಳು:**

1. ಮುಖ್ಯ ಪ್ರಧಾನ ವ್ಯವಸ್ಥಾಪಕರು(ಆಂ.ಪ). ಚಾವಿಸನಿನಿ, ಮೈಸೂರು.
2. ಮುಖ್ಯ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಲಯ, ಚಾವಿಸನಿನಿ, ಮೈಸೂರು/ಹಾಸನ.
3. ಪ್ರಧಾನ ವ್ಯವಸ್ಥಾಪಕರು, ತಾಂತ್ರಿಕ/ವಾಣಿಜ್ಯ/ಖರೀದಿ/ಯೋಜನೆಗಳು/ಲೆಕ್ಕ ಮತ್ತು ಕಂದಾಯ/ಬಿ&ಆರ್/ ಆ &ಮಾಸಂ/ ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಇವರ ಮಾಹಿತಿಗಾಗಿ.
4. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಚಾವಿಸನಿನಿ,.
5. ಎಲ್ಲಾ ಉಪ ಲೆಕ್ಕ ನಿಯಂತ್ರಣಾಧಿಕಾರಿಗಳು, ಕಾರ್ಯ ಮತ್ತು ಪಾಲನೆ ವೃತ್ತ, ಚಾವಿಸನಿನಿ,.
6. ಕಂಪನಿ ಕಾರ್ಯದರ್ಶಿ, ನಿಗಮ ಕಛೇರಿ, ಚಾವಿಸನಿನಿ, ಮೈಸೂರು ಇವರ ಮಾಹಿತಿಗಾಗಿ
7. ಉಪ ಪ್ರಧಾನ ವ್ಯವಸ್ಥಾಪಕರು(ಎಂ.ಐ.ಎಸ್. ಶಾಖೆ.) ನಿಗಮ ಕಛೇರಿ, ನಿಗಮದ ವೆಬ್‌ಸೆಟ್ ನಲ್ಲಿ ಪ್ರಕಟಿಸಲು.
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ,
9. ಎಲ್ಲಾ ಲೆಕ್ಕಾಧಿಕಾರಿ(ಆಂ.ಪ), ಕಾರ್ಯ ಮತ್ತು ಪಾಲನೆ ವಿಭಾಗ, ಚಾವಿಸನಿನಿ,
10. ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು(ತಾಂತ್ರಿಕ)/ನಿರ್ದೇಶಕರು(ಹಣಕಾಸು)ರವರುಗಳ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತ, ಸುತ್ತೋಲೆಯ ಮಾಹಿತಿಯನ್ನು ಮಾನ್ಯ ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ತಾಂತ್ರಿಕ)/ ನಿರ್ದೇಶಕರು(ಹಣಕಾಸು)ರವರ ಗಮನಕ್ಕೆ ತರುವಂತೆ ಕೋರಿದೆ.
11. ವ್ಯ-1/ಪ್ರ.ಕ.

**ಪ್ರತಿಗಳು ಮಾಹಿತಿಗಾಗಿ**

1. ಉಪಾಧ್ಯಕ್ಷರು, ಚಾವಿಸನಿನಿ, ನೌಕರರ ಸಂಘ, ರಿ(659), ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
2. ಉಪಾಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ: ಕಡಕೊಳ, ಮೈಸೂರು.
3. ಉಪಾಧ್ಯಕ್ಷರು, ಪರಿಶಿಷ್ಠ ಜಾತಿ/ಪರಿಶಿಷ್ಠ ವರ್ಗಗಳ ಕಲ್ಯಾಣ ಸಂಸ್ಥೆ, (ರಿ.), ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
4. ಉಪಾಧ್ಯಕ್ಷರು, ಡಿಪ್ಲೋಮ, ಇಂಜಿನಿಯರ್‌ಗಳ ಸಂಘ, ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.
5. ಕಾರ್ಯದರ್ಶಿ, ಚಾವಿಸನಿನಿ, ಲೆಕ್ಕಾಧಿಕಾರಿಗಳ ಸಂಘ, ಎಂ.ಪಿ ಅಂಡ್ ಎಲ್ ಕಾಂಪೌಂಡ್, ಶ್ರೀ ಹರ್ಷ ರಸ್ತೆ, ಮೈಸೂರು.